ಅವನು ಹಿಂದಿನ ದಿನದಿಂದ ಬಂದಿಲ್ಲವೆಂದು ತಿಳಿಯಿತು. ಇವರ ಆಗಮನದ ವಿಷಯವರಿತು ವಿಚಾರಿಸಲು ಬಂದ ಹೆಣ್ಣುಮಗಳು ಅಂಕಿತಾ ತುಸು ಢಾಳಾಗಿ ಮೇಕಪ್ ಮಾಡಿಕೊಂಡು ತುಂಡು ತೋಳಿನ ಸಲ್ವಾರ್ ಧರಿಸಿ ಕೂದಲು ಬಿಟ್ಟುಕೊಂಡು ಇಡೀ ಕಚೇರಿಯನ್ನು ನಿಯಂತ್ರಿಸುತ್ತಿದ್ದವಳಂತೆ ಕಂಡು ಬಂದಳು, 'ಹೇಳಿ ಸರ್... ಏನು ಆಗಬೇಕಿತ್ತು...?'

'ನಾನು ಪ್ರದೀಪನ ಮಾವ... ಅಂದ್ರೆ ಅವ್ನ ಹೆಂಡ್ತಿ ನಿವೇದಿತಾ ತಂದೆ ನಾನು. ಅವನು ಎಲ್ಲಿದ್ದಾನೆಂದು ತಿಳಿದಿದೆಯೇ? ಮನೇಲೂ ಇಲ್ಲವೆಂದು ತಿಳಿಯಿತು... ಫೋನ್ ಸ್ವಿಚ್ ಆಫ್ ಆಗಿದೆ.. ಅದಕ್ಕೇ ವಿಚಾರಿಸೋಣಾ ಅಂತ ಬಂದೆ...'

'ನಮಗೂ ಗೊತ್ತಿಲ್ಲ ಸರ್.. ನಮ್ಹತ್ರನೂ ಏನೂ ಹೇಳಿಲ್ಲ..' ಆಕೆ ತಲೆ ಕೊಡವಿದಾಗ ಬಂದ ದಾರಿಗೆ ಸುಂಕವಿಲ್ಲವೆನ್ನುವಂತೆ ಎದ್ದರು. ಮುಂದೇನು ಮಾಡಬೇಕೆಂದು ದಿಕ್ಕು ತೋಚದಂತಾಗಿತ್ತು. ಅಲ್ಲಿಂದ ಕತ್ರಿಗುಪ್ಪೆಯಲ್ಲಿದ್ದ ಅವನ ಮನೆ ತನಕವೂ ಹೋಗಿ ಮನೆಯಲ್ಲಿದ್ದ ಕೆಲಸದವರ ಬಳಿ ವಿಚಾರಿಸಿದರೂ ಅಲ್ಲೂ ಯಾವ ಮಾಹಿತಿ ಸಿಗಲಿಲ್ಲ. ಕಾಲೆಳೆದುಕೊಂಡು ಹಿಂತಿರುಗಿದ ಪತಿಯ ಬಾಡಿದ ಮುಖ ನೋಡುತ್ತಲೇ ವೀಣಾರಿಗೆ ಪರಿಸ್ಥಿತಿಯ ಅರಿವಾಯಿತು. ಆಫೀಸಿನಲ್ಲಿದ್ದ ಅಂಕಿತಾಳ ಪ್ರಸ್ತಾಪ ಮಾಡುತ್ತಲೇ ಹೆತ್ತವರ ಮಾತುಗಳನ್ನು ಕುಳಿತು ಆಲಿಸುತ್ತಿದ್ದ ನಿವೇದಿತಾಳ ಮುಖಭಾವ ಬದಲಾಯಿತು, 'ಅವ್ಳು ಬಂದ್ಮೇಲೆ ಪ್ರದೀಪನ ವರ್ತನೆ ಪೂರ್ತಿ ಬದಲಾಗಿದೆ ಪಪ್ಪ... ಎಲ್ಲಾ ಶುರುವಾಗಿದ್ದು ಅವ್ಳು ಬಂದ್ಮೇಲೆ... ನಾನು ಗರ್ಭಿಣಿ ಆಗೋ ಹೊತ್ತಲ್ಲೇ ಅವ್ಳು ನಮ್ಮ ಕಂಪೆನಿ ಸೇರಿದ್ದಳು.. ಇಡೀ ಆಫೀಸು ಈಗ ಅವ್ಳ ಹಿಡಿತದಲ್ಲಿದೆ... ಪ್ರದೀಪ ಅವ್ಳು ಹಾಕಿದ ಗೆರೆ ದಾಟಲ್ಲ... ಅವ್ಳನ್ನು ಹೊಗಳಿದಷ್ಟೂ ಇವ್ರಿಗೆ ಸಾಲಲ್ಲ... ಅವ್ಳ ಮೇಕಪ್ ಏನು, ಅವ್ಳ ವರ್ತನೆ ಏನೂ... ನಾನು ಇವ್ರಿಗೆ ಎಷ್ಟೋ ಹೇಳಿ ನೋಡಿದೆ... ಅವ್ರು ನನ್ಮಾತೇ ಕೇಳಲ್ಲ... ಅವ್ಳ ವಿಚಾರವಾಗಿ ನನ್ನೂ ಇವ್ರಿಗೂ ಎಷ್ಟೋ ಸಲ ಮನಸ್ತಾಪವಾಗಿದೆ...' ನಿವೇದಿತಾಳ ಬಾಯಿಯಿಂದ ಅಪರೂಪಕ್ಕೆ ಪತಿಯ ಕುರಿತು ಆಕ್ಷೇಪ ಹೊರ ಬಂದಿತು. ಕೇಶವರ ಮತ್ತು ವೀಣಾರ ಮನಸ್ಸು ರಾಡಿಯಾಗಲು ಅಷ್ಟು ಸಾಕಾಯಿತು. ಪ್ರದೀಪ ನಿವೇದಿತಾಳನ್ನು ಇಲ್ಲಿ ಕಳಿಸುವುದಕ್ಕೂ ಆ ಹೆಣ್ಣಿಗೆ ಪ್ರದೀಪನ ಮೇಲಿರುವ ಸಲುಗೆ ಅಥವಾ ಆತ್ಮೀಯತೆ ಕಾರಣವಿರಬಹುದೇ? ಆಕೆ ಬಂದ ಬಳಿಕ ನಿವೀ ಬೇಡವಾದಳೇ? ಹೀಗೊಂದು ಸಾಧ್ಯತೆ ಇರಬಹುದೇ..? ನಿವೇದಿತಾಳ ಮನದಲ್ಲೇ ಸಂಶಯ ಸುಳಿಯಬೇಕಾದರೆ ಆ ಹೆಣ್ಣು ಮಿತಿಮೀರಿದ ಸ್ವಾತಂತ್ರ್ಯ ಪ್ರದೀಪನ ಜೀವನದಲ್ಲಿ ತೋರಿಸಿರಬಹುದೇ? ಈ ಗೊಂದಲಗಳ ನಿವಾರಣೆ ಹೇಗೆ? ಮಗಳ ಮುಂದಿನ ಜೀವನದ ಗತಿ ಏನು? ನಿವೇದಿತಾಳ ಜೀವನ ಅವರ ಕಣ್ಣಿಗೆ ಡೋಲಾಯಮಾನವಾಗಿ ಕಂಡಿತು. ಕೇಶವರಿಗೆ ತಮ್ಮ ಸಂಕಟವನ್ನು ಮಗಳೆದುರು ಹೊರ ಹಾಕಲೂ ಆಗದೇ ಒಳ ನುಂಗಲೂ ಆಗದೇ ಮನದೊಳಗೇ ಸುಂಟರಗಾಳಿ ಹೊತ್ತಂತೆ ಒಳಗೇ ತಲ್ಲಣಿಸಿದರು.

## ಕಳೆದ ಸಂಚಿಕೆಯಲ್ಲಿ



ತಕ್ಷಣ ಹೊರಟುಬನ್ನಿ ಎಂದು ಕರೆಮಾಡಿದ ಅಳಿಯನ ಮಾತಿಗೆ ಓಗೊಟ್ಟು ಮಗಳ ಮನೆಗೆ ಬಂದ ಕೇಶವ–ವೀಣಾ ದಂಪತಿಗೆ ಆಘಾತ ಕಾದಿತ್ತು. ಮಗಳು ನಿವೇದಿತಾ ಹಾಗೂ ಅವಳ ಕೈಕೂಸು ನಿಧಿಯನ್ನು ಕಂಡು ಸಮಾಧಾನವೆನ್ನಿಸಿದರೂ, ಅಳಿಯನ ಮಾತು ದಂಪತಿಯನ್ನು ಅಚ್ಚರಿ–ಆಘಾತಕ್ಕೆ ಈಡುಮಾಡಿತು. ಪುಟ್ಟ ಮಗುವನ್ನು ಕೊಲ್ಲಲು ನಿವೇದಿತಾ ಪ್ರಯತ್ನಿಸಿದಳು ಎನ್ನುವ ಅಳಿಯ ಪ್ರದೀಪನ ಮಾತನ್ನು ಅರಗಿಸಿಕೊಳ್ಳುವುದೇ ಪ್ರದೀಪರಿಗೆ ಕಷ್ಟವಾಯಿತು. ಸ್ವಲ್ಪ ದಿನಗಳ ಕಾಲ ಮಗಳು–ಮೊಮ್ಮಗಳನ್ನು ಮನೆಗೆ ಕರೆದುಕೊಂಡು ಹೋಗುವುದೇ ಒಳ್ಳೆಯದೆನ್ನಿಸಿತು. ಅಳಿಯನೊಂದಿಗೆ ಕೊಂಚ ಒರಟಾಗಿಯೇ ಮಾತನಾಡಿದ ಕೇಶವ, ನಿವೇದಿತಾಳನ್ನು ಮನೆಗೆ ಕರೆದುಕೊಂಡು ಬಂದರು. ಮಗಳ ಸಂಸಾರದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದು ಸ್ಪಷ್ಟವಾಯಿತು. ನಿವೇದಿತಾ ಮನೆಗೆ ಬಂದಮೇಲೆ, ಅತ್ತ ಪ್ರದೀಪ ಯಾರ ಸಂಪರ್ಕಕ್ಕೂ ಸಿಗದೆ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದ.

* * *

ಪ್ರದೀಪನ ಮಾಹಿತಿಯಿಲ್ಲದೆ ಆಕಾಶ ತಲೆ ಮೇಲೆ ಕವುಚಿ ಬಿದ್ದವರಂತೆ ಚಿಂತೆಯಿಂದ ಕುಗ್ಗಿಹೋಗಿದ್ದ ಕೇಶವರ ಮೊಬೈಲ್‌ಗೆ ಆತನದ್ದೇ ಕರೆ ಬಂದಾಗ ಅವರಿಗೆ ಹೋದ ಜೀವ ಮರಳಿ ಬಂದಂತಾಗಿತ್ತು. 'ಏನಪ್ಪಾ..? ಎಲ್ಲಿಗೆ ಹೋಗಿದ್ದೆ ಇಷ್ಟು ದಿನ..?'

'ಕ್ಷಮಿಸಿ ಮಾವ... ಸ್ವಲ್ಪ ಕಾನೂನಿನ ತೊಡಕಿತ್ತು. ಅದನ್ನು ನಿವಾರಿಸಿಕೊಳ್ಳಲು ದೂರ ಉಳಿಯಬೇಕಾಯಿತು...'

'ಅದನ್ನು ಹೇಳಿಕೊಳ್ಳಬಹುದಿತ್ತು ತಾನೇ... ನಾವೆಲ್ಲಾ ಎಷ್ಟು ಹೆದರಿಹೋಗಿದ್ದೆವು ಗೊತ್ತಾ? ಮೊದಲು ನಿವೀ ಹತ್ರ ಮಾತನಾಡು' ಎಂದು ಫೋನನ್ನು ಮಗಳ ಕೈಗೆ ರವಾನಿಸಿದರು. ನಿವೇದಿತಾ ಮೊಬೈಲ್ ಸ್ವೀಕರಿಸಿ ಅಲ್ಲಿಂದ ದೂರ ಸರಿದು ಪತಿಯ ಬಳಿ ಮಾತನಾಡಿದಳು. ಅವಳ ಮುಖವೂ ಬೆಳಗಿದ್ದನ್ನು ಕಂಡು ಕೇಶವರ ಮನಸ್ಸು ನಿರಾಳವಾಯಿತು. ನಿವೇದಿತಾಳ ಬಳಿ ಮಾತನಾಡಿದ ಬಳಿಕ ಆಕೆ ಪುನಃ ಫೋನ್ ತಂದು ತಂದೆಯ ಕೈಗೆ ಕೊಟ್ಟಳು, 'ಮಾವ... ನಾನು ನಿಮ್ಮನ್ನು ಅವತ್ತು ಮನೆಗೆ ಕರೆಸಿ ಹೇಳಿದ ವಿಚಾರ ಏನಾಯಿತು..? ವಿಚಾರಿಸಿದ್ರಾ..?' ಎಂದು ಕೇಳಿದ.

ಕೇಶವರಿಗೆ ಗಂಟಲಲ್ಲಿ ಏನೋ ಸಿಲುಕಿಕೊಂಡಂತಾಗಿತ್ತು. ಹೇಗೆ ಪ್ರತಿಕ್ರಿಯಿಸಬೇಕೆಂದೇ ತೋಚಲಿಲ್ಲ. ಅವರ ಮೌನವೇ ಅವನಿಗೆ ಉತ್ತರ ಹೇಳಿತ್ತು.

'ಪರವಾಗಿಲ್ಲ ಮಾವ... ನಿವೇದಿತಾ ಅಲ್ಲೇ ಇರಲಿ ಸ್ವಲ್ಪ ದಿನ. ನಿಧೀನೂ ಅವ್ಳನ್ನೂ ಚೆನ್ನಾಗಿ ನೋಡಿಕೊಳ್ಳಿ...' ಎಂದ.

'ಇವನೇಕೆ ಪತ್ನಿಯನ್ನು ದೂರವಿರಿಸುತ್ತಿದ್ದಾನೆ? ಏನು ಇವನ ಉದ್ದೇಶ?' ಕೇಶವರ ಕಣ್ಮುಂದೆ ಅಂಕಿತಾಳ ಮುಖ ಸುಳಿದಾಗ ಎದೆ ಹೊಡೆದುಕೊಳ್ಳಲಾರಂಭಿಸಿತ್ತು. ಮಗಳ ಮಾತುಗಳು ನೆನಪಾಗಿ ಸಲ್ಲದ ಅನುಮಾನಗಳು ಸುಳಿದು ಅವರನ್ನು ವಿಹ್ವಲಗೊಳಿಸಿದವು. ಏಕಾಂತದಲ್ಲಿ ವೀಣಾರ ಬಳಿ ತಮ್ಮ ಅನುಮಾನವನ್ನು ಹೊರಗೆಡವಿದಾಗ ಅವರು, 'ಇವ್ಳನ್ನು ಇಲ್ಲಿಟ್ಟು ಮಾಡುವುದೇನು... ಅಲ್ಲೇ ಕಳಿಸೋಣ... ಇವ್ಳಿಲ್ಲಿ ಇದ್ರೆ ಅವ್ನಿಗೆ ಅಲ್ಲಿ ಹೇಳೋರು ಕೇಳೋರು ಯಾರೂ ಇರಲ್ಲ... ಆ ಹುಡ್ಗೀ ಬೇರೆ ಚೆಲ್ಲು ಅಂತೀರಾ... ಏನು ಕತೆನೋ... ಪ್ರಪಂಚ ಪೂರ್ತಿ ಹಾಳಾಗಿದೇರಿ... ನಮ್ಮ ಜಾಗ್ರತೆ ನಾವು ಮಾಡಬೇಕು.. ಅಷ್ಟೇ...'

'ಆದ್ರೆ ನಿವೀನ್ನ ಹೇಗೆ ಕಳಿಸೋದು?'

'ಏನಾದರೂ ಹೇಳಿದರಾಯಿತು ಬಿಡಿ...' ಎಂದರು ವೀಣಾ. ವೀಣಾ ಏನೋ ನೆವ ಹೇಳಿ ನಿವೇದಿತಾಳನ್ನು ಒಪ್ಪಿಸಿ ಮರುದಿನ ಪ್ರದೀಪನ ಮನೆಗೆ ಹೊರಡುವ ಸಿದ್ಧತೆ ನಡೆಸಿದರು. ನಿವೇದಿತಾ ಕೂಡಾ ಹೆಚ್ಚು ಪ್ರಶ್ನಿಸಲು ಹೋಗಲಿಲ್ಲ. ಅವಳಿಗೆ ತನ್ನ ಗೂಡು ಸೇರಿದರೆ ಸಾಕೆನ್ನುವ ಕಾತರವಿತ್ತು. ರಾತ್ರಿ ವೀಣಾರ ದೊಡ್ಡಪ್ಪನ ಮಗ ಅರವಿಂದರ ಕರೆ ಬಂದಾಗ ವೀಣಾರ ಮುಖ ಮೊರದಗಲವಾಗಿತ್ತು. ಅರವಿಂದರೆಂದರೆ ಮುಂಚಿನಿಂದಲೂ ವೀಣಾರಿಗೆ ಹೆಚ್ಚು ವಾತ್ಸಲ್ಯ. ಅವರೂ ತಂಗಿಯ ಮೇಲೆ ಹೆಚ್ಚೇ ಅಕ್ಕರೆ, ಅಭಿಮಾನ ತೋರಿಸುತ್ತಿದ್ದರು. ಅವನ ಮಗಳು ಕೃತ್ತಿಕಾ ಮದುವೆಯಾಗಿ ವಿದೇಶದಲ್ಲಿ ನೆಲೆಸಿದ್ದಳು. ಅವಳು ರಜೆಯ ಮೇಲೆ ಮಕ್ಕಳೊಂದಿಗೆ ಊರಿಗೆ ಬರುವವಳಿದ್ದಳು. ಅವಳನ್ನು ಏರ್‌ಪೋರ್ಟ್‌ನಿಂದ ಊರಿಗೆ ಕರೆದೊಯ್ಯಲು ಇವರ ಮನೆಗೆ ಅರವಿಂದರ ಸಂಸಾರ ಬರುವುದಿತ್ತು. ಒಂದು ದಿನ ಇಲ್ಲೇ ತಂಗುವವರಿದ್ದರು. ನಿವೇದಿತಾ ತವರಿನಲ್ಲೇ ಇರುವ ಸಂಗತಿ ಕೇಳಿ ಅರವಿಂದ ಮತ್ತವರ ಪತ್ನಿಯೂ ಖುಷಿಗೊಂಡರು 'ಅವ್ಳಿಗೂ ಉಳಿಯೋದಿಕ್ಕೆ ಹೇಳು... ಒಂದು ದಿನ ತಾನೇ... ನಮ್ಜೊತೆ ಅವಳೂ ಸಮಯ ಕಳೀಲಿ. ಕೃತ್ತಿಕಾ ಬರೋದೇ ಅಪರೂಪ...' ಎಂದಾಗ ವೀಣಾರಿಗೂ ಸೋದರನ ಮಾತನ್ನು ತಳ್ಳಿ ಹಾಕಲು ಆಗಲಿಲ್ಲ.

'ಇರ್ತಾಳೆ ಬಿಡು... ಅವ್ರಿಬ್ರು ಸೇರೋದೇ